**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 32/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.04**

**ದಿನಾಂಕಃ** 18.09.2025 **ಸಿಡಬ್ಲ್ಯೂ.05**

| | |
|---|---|
| ಹೆಸರು | ಹೇಮಾವತಿ |
| ತಂದೆ ಹೆಸರು | ಮಂಜಪ್ಪ |
| ವಯಸ್ಸು | 44 ವರ್ಷ |
| ಉದ್ಯೋಗ | ಅಡುಗೆ ಕೆಲಸ |
| ವಾಸ ಸ್ಥಳ | ಕೊಂಡಜ್ಜಿ ಗ್ರಾಮ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ. 1,4 ಮತ್ತು 6 ರವರ ಪರಿಚಯವಿದೆ. ಈಗ್ಗೆ 2021 ರಲ್ಲಿ 1 ದಿನ ನಾವು ಕೊಂಡಜ್ಜಿ ಪ್ರೌಡ ಶಾಲೆಯಲ್ಲಿ ಬೆಳಿಗ್ಗೆ ಸುಮಾರು 10.00 ಗಂಟೆಗೆ ಚಾಸಾ.4 ರವರು ದಾಸ್ತಾನು ಕೊಠಡಿಗೆ ಹೋಗಿ ನೋಡಿದಾಗ ಸದರಿ ಕೊಠಡಿಯಿಂದ ಅಡುಗೆಗೆ ಉಪಯೋಗಿಸುವ ಎಣ್ಣೆಯ 3 ಬಾಕ್ಸಗಳು ಕಳುವಾಗಿತ್ತು. ಸದರಿ ಸಂದರ್ಭದಲ್ಲಿ ನಾನು ಅವರೊಂದಿಗೆ ಹೋಗಿ ನೋಡಿದೆನು. ಕಳುವಾದ ವಿಚಾರವನ್ನು ಮುಖ್ಯೋಪಾದ್ಯಾಯರು ತಿಳಿಸಿದರು. ಸದರಿ ಎಣ್ಣೆ ಪ್ಯಾಕೆಟಗಳನ್ನು ಕೊಠಡಿಯ ಕಿಟಕಿ ಗ್ಲಾಸ್ ಒಡೆದು ಕಳುವು ಮಾಡಿದ್ದರು. ನಂತರ ಸದರಿ ವಿಚಾರವನ್ನು ನಮ್ಮ ಶಾಲೆಯ ಮುಖ್ಯೋಪಾದ್ಯಾಯರಿಗೆ ತಿಳಿಸಿದೆವು. ಈ ವಿಚಾರವಾಗಿ ಮುಖ್ಯೋಪಾದ್ಯಾಯರು ಠಾಣೆಗೆ ದೂರು ನೀಡಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಈಗ ನ್ಯಾಯಾಲಯದಲ್ಲಿರುವ ಆರೋಪಿ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದುಾರು ನೀಡಿದ ನಂತರ ಪೊಲೀಸರು ಕಳ್ಳರನ್ನು ಪತ್ತೆ ಮಾಡಿರುತ್ತಾರೆ ಎಂಬ ವಿಚಾರ ನನಗೆ ತಿಳಿದಿಲ್ಲ. ಆರೋಪಿತರು ಜಾಮೀನಿನ ಮೇಲಿ ಬಿಡುಗಡೆ ಮಾಡಿದ ವಿಚಾರ ನೀಡಿದ ನಂತರ ಪೊಲೀಸರಿಗೆ ನಾನು

ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಗುರುತಿಸಲು ನಿರಾಕರಿಸಿದ ಮರುಹೇಳಿಕೆಯನ್ನು ನಿಪಿ.7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಬಿ ವಕೀಲರಿಂದಃ**

ಇದೇ ಪ್ರಕರಣಕ್ಕೆ ಸಂಬಂದಿಸಿದಂತೆ ಜ್ಯುವೆನಲ್ ನ್ಯಾಯಾಲಯ, ದಾವಣಗೆರೆಯಲ್ಲಿ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ಪೊಲೀಸರು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಓದಿ ಹೇಳಿಲ್ಲ ಎಂದರೆ ಸರಿ. ಪೊಲೀಸರು ನೋಟಿಸ್ ನೀಡಿ ನನ್ನನ್ನು ಠಾಣೆಗೆ ಕರೆಸಿಲ್ಲ. ದಾಸ್ತಾನಿನ ಬಗ್ಗೆ ದಾಖಲಾತಿ ಇರುತ್ತವೆ ಎಂದರೆ ಸರಿ. ಕಳ್ಳತನವಾದ ವಿಚಾರವನ್ನು ಮುಖ್ಯೋಪಾದ್ಯಾಯರಿಗೆ ಚಾಸಾ.4 ರವರು ಮಾಹಿತಿ ನೀಡಿರುತ್ತಾರೆ. ಸದರಿಯವರು ಏನು ಮಾಹಿತಿ ತಿಳಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದೂರು ನೀಡಿದ ದಿನ ಪೊಲೀಸರು ಸ್ಥಳಕ್ಕೆ ಬಂದಿದ್ದರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ದಿನ ದೂರು ನೀಡಿದ ಬಗ್ಗೆ ಮುಖ್ಯೋಪಾದ್ಯಾಯರೇ ನನಗೆ ತಿಳಿಸಿರುತ್ತಾರೆ. ದಾಸ್ತಾನು ಕೊಠಡಿಯಲ್ಲಿ ಯಾವ ಯಾವ ಪದಾರ್ಥಗಳು ಎಷ್ಟು ಪ್ರಮಾಣದಲ್ಲಿ ಇದ್ದವು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನಮ್ಮ ಶಾಲೆಯಲ್ಲಿ ಎಷ್ಟು ಎಣ್ಣೆ ಪ್ಯಾಕೆಟಗಳು ಬಂದಿದ್ದವು ಎಂದು ನನಗೆ ಮಾಹಿತಿ ಇಲ್ಲ. ಸಾಕ್ಷಿಯು ಆದರೆ 30 ಎಣ್ಣೆ ಪ್ಯಾಕೆಟಗಳು ಕಳ್ಳತನವಾಗಿದ್ದವು ಎಂದು ನುಡಿಯುತ್ತಾರೆ . ಸದರಿ 30 ಎಣ್ಣೆ ಪ್ಯಾಕೆಟಗಳನ್ನು ನಾನು ನೋಡಿಲ್ಲ ಎಂದರೆ ಸರಿ. ಸದರಿ ಎಣ್ಣೆ ಪ್ಯಾಕೆಟಗಳು ಯಾವ ಕಂಪನಿಯವು ಮತ್ತು ಎಷ್ಟು ತೂಕದ್ದು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ**

2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದು ವಿನಂತಿ ಮೇರೆಗೆ ಅದನ್ನೇ ಅಳವಡಿಸಿಕೊಳ್ಳಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**ಇರುವುದಿಲ್ಲ.**

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ